QP – 270

45

III Semester B.Com. Examination, March/April 2022
(R) (CBCS) (2015 – 16 and Onwards)
COMMERCE
Paper – 3.3 : Corporate Accounting

St Claret College
LIBRARY
Bangalore-560 013

Time : 3 Hours Max. Marks : 70

Instruction : *Answer should be written **completely** either in **English** or in **Kannada**.*

SECTION – A

1. Answer **any five** sub-questions. **Each** sub-question carries **two** marks. **(5×2=10)**

   a) How do you treat the profit, which is earned prior to incorporation of a company ?

   b) What is Fair Value of shares ?

   c) What is Corporate Dividend Tax ?

   d) State any four factors affecting goodwill.

   e) Why underwriting commission is paid by company ?

   f) Fixed assets Rs. 10,00,000, Current Assets Rs. 8,00,000, Arrears of preference dividend Rs. 60,000, 8% preference share capital Rs. 5,00,000, Current liabilities Rs. 2,50,000, 9% Debentures Rs. 2,00,000.
   Calculate Net Assets available to Equity Share Holders.

   g) Mention any two expenses charged only to post incorporation period.

SECTION – B

Answer **any three** questions. **Each** question carries **six** marks. **(3×6=18)**

2. ABC Co. issued 50,000 shares of Rs. 10 each. The whole issue was fully underwritten by M, N, O and P as follows.
   M – 20,000 shares, N – 15,000 shares, O – 5,000 shares and P – 10,000 shares. The company received applications for 45,000 shares of which marked applications were as follows :
   M – 22,000 shares; N – 11,000 shares; O – 1,000 shares and P – 9,000 shares.
   Determine the Net liability of each underwriters.

P.T.O.

3. Following are the particulars of White Rose Co. Ltd. :

	Rs.
Fixed assets	10,00,000
Current assets	6,00,000
50,000 equity shares of Rs. 10 each	5,00,000
5,000, 12% preference shares of Rs. 100 each	5,00,000
Bills Payable	50,000
8% Debentures	3,00,000
Bank Overdraft	60,000
Goodwill	1,20,000

The market value of fixed assets (including goodwill) is 15% more than book value and that of current assets is 7.5% less than the book value.

There is an un-recorded liability of Rs. 6,000.

Determine intrinsic value of equity shares.

4. From the following information ascertain :

i) Total purchase consideration payable

ii) Purchase consideration payable for pre and post incorporation period

iii) Total interest payable on purchase consideration

iv) Interest on purchase consideration payable for pre and post incorporation period

a) Purchasing Co. name : ABC Ltd.

b) Vendor Firm name : SM Firm

c) Actual purchase date : 1/1/2021

d) Incorporation certificate date : 1/8/2021

e) Total purchase consideration paid on 1/10/2021

f) Accounting period ending date : 31/12/2021

g) Assets of Rs. 20,00,000 taken over at 5% more than book value.

h) Liabilities Rs. 12,00,000 assumed at 3% less than book value

i) Interest payable on purchase consideration at 5% p.a.

5. What is underwriting ? Briefly explain the types of underwriting.

6. Under what heading do you show the following items in the Balance Sheet ?

a) Live stock

b) Accrued interest on investment

c) Fixed deposit from public

d) Proposed dividend

e) Discount on issue of debentures

f) Underwriting commission.

SECTION – C

Answer **any three** questions. **Each** question carries **fourteen** marks. **(3×14=42)**

7. Samsung Ltd. invited applications from the public for 2,50,000 shares of Rs. 10 each, at a premium of Rs. 2 per share. Entire issue was underwritten by underwriters A, B, C and D to the extent of 20%, 30%, 20%, 30% with the provision of firm underwriting of 2,500 shares, 5,000 shares, 2,500 shares and 7500 shares respectively. The company received applications for 1,75,000 shares excluding firm underwriting, out of which marked applications were

A – 20,000 shares, B – 25,000 shares, C – 52,000 shares and D – 47,500 shares respectively.

Prepare a statement showing the net liability of underwriters treating

a) Firm underwriting as marked applications

b) Firm underwriting as unmarked applications

c) Calculate the underwriting commission payable at 3%.

8. MN Ltd. took over the business of AB firm on 1/4/2021 and it was incorporated on 1/8/2021. The company closes its books of accounts on 31/03/2022. The P&L A/c of MN Ltd. on 31/3/2022 was as follows :

Particulars	Amount Rs.	Particulars	Amount Rs.
To Bad debts	3,200	By Gross profit	1,80,000
" Discount allowed	1,000	" Bad debts recovered	1,200
" Rent and taxes	12,000	" Interest on bank fixed deposit	2,400
" Insurance	1,500		
" Preliminary expenses written off	1,800		
" Salaries	42,000		
" M.D.'s remuneration	2,000		
" Advertising	3,000		
" Commission on sales	1,800		
" Depreciation on machinery	11,667		
" Net profit c/d	1,03,633		
	1,83,600		**1,83,600**

Additional information :

1) The average monthly sales after incorporation was double the average monthly sales before.
2) Rent which was paid for the first 5 months at Rs. 500 p.m. and increased by Rs. 100 p.m. for the balance of the period.
3) Bad debts of Rs. 900 related only to the period after 1/8/2021 and the balance related to the sales made upto 1/10/2021.
4) Depreciation on machinery was 20% on Rs. 1,00,000 and purchased on 1/6/2021 and used upto 31/01/2022.
5) Bank deposit made on 1/7/2021.
6) Bad debts realised belong to the bad debts which were written off in 2020-21.

Find out the profits or loss before and after incorporation.

9. The Balance Sheet of Long Road Ltd. was on 31/12/2021 :

Liabilities	Amount Rs.	Assets	Amount Rs.
Equity shares of Rs. 10 each	3,50,000	Fixed assets	3,20,000
General reserve	1,20,000	Investments (long-term)	20,000
Profit and Loss A/c	75,000	(Non-government bonds)	
Current liabilities	60,000	Current assets	2,65,000
	6,05,000		**6,05,000**

Additional information :

a) Net profit before taxation :

2019 – Rs. 70,000; 2020 – Rs. 65,000; 2021 – Rs. 95,000

b) Tax rate is 25%

c) Normal rate of return is 12%

d) Transfer to general reserve 10% of profit after tax

e) Fixed assets to be taken 15% more and current liabilities at 5% less than book value.

Ascertain the value of goodwill under

i) 3 years purchase of super profits

ii) Capitalisation of super profits

iii) Annuity of super profits taking annuity factor of Re. 1 for five years at 10% as Rs. 3.78.

10. Following is the Balance Sheet of Black Light Ltd. as on 31/03/2022 :

Liabilities	Amount Rs.	Assets	Amount Rs.
20000 equity shares of		Goodwill	50,000
Rs. 10 each fully paid-up	2,00,000	Fixed assets	2,25,000
Reserve fund	50,000	Current assets	95,000
P & L A/c	17,500	Preliminary expenses	12,500
6% Debentures	50,000		
Current liabilities	65,000		
	3,82,500		**3,82,500**

For the purpose of valuation of shares, Fixed assets were valued at Rs. 2,50,000 and Goodwill at Rs. 75,000. There is a necessity of RBD at 10% on debtors of Rs. 37,500. It was found that the stock was over valued by Rs. 4,500.

The net profits for the three years were Rs. 34,500, Rs. 35,900 and Rs. 45,100 respectively, after taxation. Out of this profit 20% was placed to reserve, the proportion being considered reasonable in the industry in which the company is engaged and where the normal rate of return is 20%. Compute the value of each equity share by :

i) Intrinsic value method

ii) Yield method and

iii) Fair value method.

11. Following are the Balances of White Milk Ltd. company as on 31/03/2022. You are required to prepare Final account of the company after taking additional information into consideration.

Debit Balance	Amount Rs.	Credit Balance	Amount Rs.
Stock on 1/4/2021	1,87,500	R.D.D. as on 1/4/2021	8,750
Plant and machinery	8,25,000	General reserve	62,500

Land and buildings	7,68,000	Sales	10,37,500
Debtors	2,17,500	Creditors	1,44,375
Goodwill	62,500	Bills payable	48,125
Bank balance	1,01,625	P & L A/c	65,625
Calls in arrears	18,750	12% Debentures	7,50,000
Interim dividend	98,125	Share capital	10,00,000
Purchases	4,62,500		
Preliminary exp.	12,500		
Wages	2,44,950		
General expenses	17,085		
Salaries	50,562		
Bad debts	5,278		
Debenture interest paid	45,000		
	31,16,875		**31,16,875**

Additional information :

a) Depreciate plant and machinery at 20%

b) Closing stock is valued at Rs. 2,62,500

c) Write-off Rs. 1,250 from preliminary expenses

d) Half year debenture interest is due

e) Transfer Rs. 6,250 to general reserve

f) Outstanding salary of Rs. 6,000 and prepaid general expenses Rs. 2,000

g) Ignore Corporate Dividend Tax.

ಕನ್ನಡ ಆವೃತ್ತಿ

ವಿಭಾಗ - ಎ

1. ಯಾವುದಾದರೂ **ಐದು** ಉಪ-ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಉಪ-ಪ್ರಶ್ನೆಗೆ **ಎರಡು** ಅಂಕಗಳು. **(5×2=10)**

a) ಒಂದು ಕಂಪನಿಯು ಸಂಯೋಜನಾ ಪೂರ್ವದಲ್ಲಿ ಗಳಿಸಿರುವ ಲಾಭಾಂಶವನ್ನು ಹೇಗೆ ಪರಿಗಣಿಸುವಿರಿ ?

b) ಶೇರುಗಳ ನ್ಯಾಯಯುತ ಮೌಲ್ಯ ಎಂದರೇನು ?

c) ಕಂಪನಿಯ ಲಾಭಾಂಶ ತೆರಿಗೆ ಎಂದರೇನು ?

d) ಸುನಾಮದ ಮೇಲೆ ಪ್ರಭಾವ ಬೀರುವ ನಾಲ್ಕು ಅಂಶಗಳನ್ನು ಹೆಸರಿಸಿ.

e) ಒಂದು ಕಂಪನಿಯು ಖರೀದಿ ಭರವಸೆದಾರರಿಗೆ ದಲ್ಲಾಳಿಯನ್ನು ಏಕೆ ಕೊಡುತ್ತದೆ ?

f) ಸ್ಥಿರಾಸ್ತಿಗಳು ರೂ. 10,00,000, ಚರಾಸ್ತಿಗಳು ರೂ. 8,00,000, ಆದ್ಯತಾ ಶೇರಿನ ಮೇಲೆ ಲಾಭಾಂಶದ ಹಿಂಬಾಕಿ ರೂ. 60,000, 8% ಆದ್ಯತಾ ಶೇರು ಬಂಡವಾಳ ರೂ. 5,00,000, ಚಾಲ್ತಿ ಜವಾಬ್ದಾರಿಗಳು ರೂ. 2,50,000, 9% ಸಾಲಪತ್ರಗಳು ರೂ. 2,00,000.

ಮೇಲಿನ ವಿವರಗಳಿಂದ ಸಾಮಾನ್ಯ ಶೇರುದಾರರಿಗೆ ಲಭ್ಯವಿರುವ ನಿವ್ವಳ ಆಸ್ತಿ ಮೌಲ್ಯವನ್ನು ಕಂಡುಹಿಡಿಯಿರಿ.

g) ಕಂಪನಿಯ ಸಂಯೋಜನೆಯ ನಂತರದ ಅವಧಿಗೆ ಮಾತ್ರ ಅನ್ವಯವಾಗುವ ಎರಡು ವೆಚ್ಚಗಳನ್ನು ಹೆಸರಿಸಿ.

ವಿಭಾಗ - ಬಿ

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **ಪ್ರತಿ** ಪ್ರಶ್ನೆಗೆ **ಆರು** ಅಂಕಗಳು. **(3×6=18)**

2. ಎಬಿಸಿ ಕಂಪನಿಯು ರೂ. 10 ಮುಖಬೆಲೆಯ 50,000 ಶೇರುಗಳನ್ನು ಬಿಡುಗಡೆ ಮಾಡಿದೆ. ಇವುಗಳನ್ನು M, N, O ಮತ್ತು P ಎಂಬ ಖರೀದಿ ಭರವಸೆಗಾರರು ಈ ಕೆಳಗಿನಂತೆ ಸಂಪೂರ್ಣವಾಗಿ ಖರೀದಿ ಭರವಸೆ ಮಾಡಿರುತ್ತಾರೆ.

M – 20,000 ಶೇರುಗಳು, N – 15,000 ಶೇರುಗಳು, O – 5,000 ಶೇರುಗಳು ಮತ್ತು P – 10,000 ಶೇರುಗಳು. ಕಂಪನಿಯು ಒಟ್ಟಾರೆಯಾಗಿ 45,000 ಶೇರು ಅರ್ಜಿಗಳನ್ನು ಪಡೆದಿದ್ದು, ಅವುಗಳಲ್ಲಿ ಗುರುತಿಸಲ್ಪಟ್ಟ ಅರ್ಜಿಗಳು ಈ ಕೆಳಕಂಡಂತಿವೆ :

M – 22,000 ಶೇರುಗಳು, N – 11,000 ಶೇರುಗಳು, O – 1,000 ಶೇರುಗಳು ಮತ್ತು P – 9,000 ಶೇರುಗಳು. ಪ್ರತಿಯೊಬ್ಬ ಖರೀದಿ ಭರವಸೆದಾರರ ನಿವ್ವಳ ಜವಾಬ್ದಾರಿಯನ್ನು ಕಂಡುಹಿಡಿಯಿರಿ.

3. ವೈಟ್ ರೋಸ್ ಕಂ. ಲಿ. ಗೆ ಸಂಬಂಧಿಸಿದ ಈ ಕೆಳಗಿನ ವಿವರಗಳಿಂದ ಸಾಮಾನ್ಯ ಶೇರುಗಳ ಆಂತರಿಕ ಮೌಲ್ಯವನ್ನು ಕಂಡುಹಿಡಿಯಿರಿ.

	ರೂ.
ಸ್ಥಿರಾಸ್ತಿಗಳು	10,00,000
ಚರಾಸ್ತಿಗಳು	6,00,000
ರೂ. 10 ಮುಖಬೆಲೆಯ 50,000 ಸಾಮಾನ್ಯ ಶೇರುಗಳು	5,00,000
ರೂ. 100 ಮುಖಬೆಲೆಯ 5,000, 12% ಆದ್ಯತಾ ಶೇರುಗಳು	5,00,000
ಪಾವತಿಸಬೇಕಾದ ಹುಂಡಿಗಳು	50,000
8% ಸಾಲಪತ್ರಗಳು	3,00,000
ಬ್ಯಾಂಕಿನ ಠೇವಣಿ ಮೀರಿದ ಹಿಂಪಡೆತ (overdraft)	60,000
ಸುನಾಮ	1,20,000

ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯವು (ಸುನಾಮ ಸೇರಿದಂತೆ) ಪುಸ್ತಕದ ದರಕ್ಕಿಂತ ಶೇಕಡಾ 15 ಹೆಚ್ಚು ಹಾಗೂ ಚರಾಸ್ತಿಗಳ ಮಾರುಕಟ್ಟೆ ಮೌಲ್ಯವು ಪುಸ್ತಕದ ದರಕ್ಕಿಂತ ಶೇಕಡಾ 7.5% ಕಡಿಮೆ ಎಂದು ಪರಿಗಣಿಸುವುದು.

ಇನ್ನೂ ದಾಖಲಾಗದ ಜವಾಬ್ದಾರಿ ರೂ. 6,000 ಇದೆ.

4. ನೀಡಿರುವ ವಿವರಗಳಿಂದ ಈ ಕೆಳಗಿನವುಗಳನ್ನು ಕಂಡುಹಿಡಿಯಿರಿ.

i) ಒಟ್ಟು ಕೊಡಬೇಕಾಗಿರುವ ಖರೀದಿ ಪ್ರತಿಫಲ ಮೌಲ್ಯ.

ii) ಸಂಯೋಜನೆಯ ಪೂರ್ವದಲ್ಲಿ ಹಾಗೂ ನಂತರದಲ್ಲಿ ನೀಡಬೇಕಾಗಿರುವ ಖರೀದಿ ಪ್ರತಿಫಲ ಮೌಲ್ಯ.

iii) ಖರೀದಿ ಪ್ರತಿಫಲ ಮೌಲ್ಯದ ಮೇಲೆ ನೀಡಬೇಕಾಗಿರುವ ಒಟ್ಟು ಬಡ್ಡಿ.

iv) ಸಂಯೋಜನೆಯ ಪೂರ್ವದಲ್ಲಿ ಮತ್ತು ನಂತರದಲ್ಲಿ ಪಾವತಿಸಬೇಕಾಗಿರುವ ಬಡ್ಡಿ.

a) ಖರೀದಿಸುತ್ತಿರುವ ಕಂಪನಿಯ ಹೆಸರು : ಎಬಿಸಿ ಲಿಮಿಟೆಡ್

b) ಮಾರಾಟವಾಗುತ್ತಿರುವ ಸಂಸ್ಥೆಯ ಹೆಸರು : ಎಸ್‌ಎಮ್ ಸಂಸ್ಥೆ

c) ಸಂಸ್ಥೆಯ ಖರೀದಿ ದಿನಾಂಕ : 1/1/2021

d) ಕಂಪನಿ ಸಂಯೋಜನಾ ಪ್ರಮಾಣ ಪತ್ರದ ದಿನಾಂಕ : 1/8/2021

e) ಸಂಪೂರ್ಣ ಖರೀದಿ ಪ್ರತಿಫಲವನ್ನು ಪಾವತಿಸಿದ ದಿನಾಂಕ : 1/10/2021

f) ವರ್ಷದ ಲೆಕ್ಕ ಪತ್ರಗಳನ್ನು ತಯಾರಿಸುವ ಅಂತಿಮ ದಿನಾಂಕ : 31/12/2021

g) ಒಟ್ಟು ಆಸ್ತಿಗಳು ರೂ. 20,00,000 ಇವುಗಳನ್ನು ಶೇ. 5 ರಷ್ಟು ಹೆಚ್ಚು ಮೌಲ್ಯಕ್ಕೆ ಪಡೆಯಲಾಗಿದೆ

h) ಒಟ್ಟು ಜವಾಬ್ದಾರಿಗಳು ರೂ. 12,00,000 ಇವುಗಳನ್ನು ಶೇ. 3 ರಷ್ಟು ಕಡಿಮೆಗೆ ಒಪ್ಪಿಸಲಾಗಿದೆ

i) ಖರೀದಿ ಪ್ರತಿಫಲದ ಮೇಲೆ ನೀಡಲಾಗಿರುವ ಒಟ್ಟು ಶೇ. 5 ಪ್ರತಿವರ್ಷಕ್ಕೆ.

5. ಖರೀದಿ ಭರವಸೆ ಎಂದರೇನು ? ವಿವಿಧ ರೀತಿಯ ಖರೀದಿ ಭರವಸೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

6. ಒಂದು ಕಂಪನಿಯ ಅಢಾವೆ ಪತ್ರದಲ್ಲಿ ಈ ಕೆಳಗಿನವುಗಳು ಯಾವ ಶೀರ್ಷಿಕೆಗಳ ಅಡಿಯಲ್ಲಿ ತೋರಿಸಲಾಗುತ್ತದೆ ?

a) ಜೀವಂತ ಸರಕು (ಜಾನುವಾರು)

b) ಹೂಡಿಕೆಗಳ ಮೇಲೆ ಗಳಿಸಿರುವ ಇನ್ನೂ ಪಡೆದಿರದ ಬಡ್ಡಿ

c) ಸಾರ್ವಜನಿಕರಿಂದ ಸಂಗ್ರಹಿಸಿರುವ ನಿಶ್ಚಿತ ಅವಧಿ ಠೇವಣಿ

d) ಸೂಚಿಸಿರುವ ಲಾಭಾಂಶ

e) ಸಾಲ ಪತ್ರಗಳನ್ನು ಹಂಚಿಕೆ ಮಾಡಿದಾಗ ನೀಡಲಾಗಿರುವ ಸೋಡಿ

f) ಖರೀದಿ ಭರವಸೆದಾರರಿಗೆ ನೀಡಿರುವ ದಲ್ಲಾಳಿ.

ವಿಭಾಗ – ಸಿ

ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೆ **ಹದಿನಾಲ್ಕು** ಅಂಕಗಳು. **(3×14=42)**

7. ಸ್ಯಾಮ್‌ಸಂಗ್ ಲಿಮಿಟೆಡ್ ರೂ. 10 ಮುಖಬೆಲೆಯ, 2,50,000 ಶೇರುಗಳನ್ನು ಪ್ರತಿ ಶೇರಿಗೆ ರೂ. 2 ಹೆಚ್ಚುವರಿಯಂತೆ ಸಾರ್ವಜನಿಕರಿಗಾಗಿ ಬಿಡುಗಡೆ ಮಾಡಿದೆ. ಬಿಡುಗಡೆ ಮಾಡಲಾದ ಎಲ್ಲಾ ಶೇರುಗಳನ್ನು ಖರೀದಿ ಭರವಸೆದಾರರಾದ A, B, C ಮತ್ತು D ಕ್ರಮವಾಗಿ ಶೇ. 20 ರಷ್ಟು, ಶೇ. 30 ರಷ್ಟು, ಶೇ. 20 ರಷ್ಟು ಹಾಗೂ ಶೇ. 30 ರಷ್ಟು ಖರೀದಿ ಭರವಸೆ ಮಾಡಿರುತ್ತಾರೆ. ಇದರೊಂದಿಗೆ ನಿಶ್ಚಿತ ಖರೀದಿ ಭರವಸೆಯನ್ನು ಕ್ರಮವಾಗಿ 2,500 ಶೇರುಗಳಿಗೆ, 5,000 ಶೇರುಗಳಿಗೆ, 2,500 ಶೇರುಗಳಿಗೆ ಹಾಗೂ 7,500 ಶೇರುಗಳಿಗೆ ಖರೀದಿ ಭರವಸೆಗಾರರು ನೀಡಿರುತ್ತಾರೆ.

ಕಂಪನಿಯು ಒಟ್ಟು 1,75,000 ಶೇರುಗಳಿಗೆ ಅರ್ಜಿಯನ್ನು ಪಡೆದಿದ್ದು, ಇವುಗಳಲ್ಲಿ ನಿಶ್ಚಿತ ಖರೀದಿ ಅರ್ಜಿಗಳು ಸೇರಿರುವುದಿಲ್ಲ. ಇವುಗಳಲ್ಲಿ ಗುರುತುಮಾಡಿದ ಅರ್ಜಿಗಳು A – 20,000 ಶೇರುಗಳು, B – 25,000 ಶೇರುಗಳು, C – 52,000 ಶೇರುಗಳು ಮತ್ತು D – 47,500 ಶೇರುಗಳು ಆಗಿರುತ್ತವೆ.

ಮೇಲಿನ ವಿವರಗಳಿಂದ

a) ನಿಶ್ಚಿತ ಖರೀದಿ ಅರ್ಜಿಗಳನ್ನು ಗುರುತು ಮಾಡಿದ ಅರ್ಜಿಗಳೆಂದು ಪರಿಗಣಿಸಿದಾಗ

b) ನಿಶ್ಚಿತ ಖರೀದಿ ಅರ್ಜಿಗಳನ್ನುಗುರುತು ಮಾಡಿರದ ಅರ್ಜಿಗಳೆಂದು ಪರಿಗಣಿಸಿದಾಗ

ಖರೀದಿ ಭರವಸೆದಾರರ ನಿವ್ವಳ ಜವಾಬ್ದಾರಿಯನ್ನು ತೋರಿಸುವ ಪತ್ರಿಕೆಯನ್ನು ತಯಾರಿಸಿ ದಲ್ಲಾಳಿಯನ್ನು ಲೆಕ್ಕಮಾಡಿ.

c) ಇದರೊಂದಿಗೆ ಖರೀದಿ ಭರವಸೆದಾರರಿಗೆ ನೀಡಬೇಕಾಗಿರುವ ಶೇ. 3 ರಷ್ಟು ದಲ್ಲಾಳಿಯನ್ನು ಲೆಕ್ಕ ಮಾಡಿ.

8. MN ಲಿಮಿಟೆಡ್ ದಿನಾಂಕ 1/4/2021ರಂದು AB ವ್ಯವಹಾರ ಸಂಸ್ಥೆಯನ್ನು ಖರೀದಿ ಮಾಡಿದ್ದು, ಸಂಯೋಜನ ಪ್ರಮಾಣ ಪತ್ರವನ್ನು ದಿನಾಂಕ 1/8/2021ರಂದು ಪಡೆದಿದೆ. ಕಂಪನಿಯು ತನ್ನ ಲೆಕ್ಕ ಪತ್ರಗಳನ್ನು ದಿನಾಂಕ 31/03/2022ಕ್ಕೆ ಅಂತಿಮಗೊಳಿಸಿದ್ದು, ಅಂದಿನ ಲಾಭ-ನಷ್ಟ ಪತ್ರಿಕೆಯು ಈ ಕೆಳಗಿನಂತಿದೆ.

ವಿವರಗಳು	ಮೊತ್ತ ರೂ.	ವಿವರಗಳು	ಮೊತ್ತ ರೂ.
ವಸೂಲಾಗದ (ಕೆಟ್ಟ) ಸಾಲಗಳು	3,200	ಒಟ್ಟು ಲಾಭ	1,80,000
ನೀಡಲಾದ ಸೋಡಿ	1,000	ಮರುಪಾವತಿಯಾದ ವಸೂಲಾಗದ ಸಾಲ	1,200
ಬಾಡಿಗೆ ಮತ್ತು ತೆರಿಗೆ	12,000	ಬ್ಯಾಂಕಿನ ನಿಶ್ಚಿತ ಠೇವಣಿಯ ಮೇಲೆ ಪಡೆದ ಬಡ್ಡಿ	2,400
ವಿಮೆ	1,500		
ತೆಗೆದು ಹಾಕಿರುವ ಪ್ರಾರಂಭಿಕ ವೆಚ್ಚಗಳು	1,800		
ವೇತನಗಳು	42,000		
M.D.ರವರ ಸಂಭಾವನೆ	2,000		
ಜಾಹೀರಾತು	3,000		
ಮಾರಾಟದ ಮೇಲಿನ ದಲ್ಲಾಳಿ	1,800		
ಯಂತ್ರದ ಮೇಲಿನ ಸವಕಳಿ	11,667		
ನಿವ್ವಳ ಲಾಭ	1,03,633		
	1,83,600		**1,83,600**

ಹೆಚ್ಚುವರಿ ವಿವರಗಳು :

1) ಸಂಯೋಜನಾ ಪ್ರಮಾಣ ಪತ್ರ ಪಡೆದ ನಂತರದ ಅವಧಿಯ ತಿಂಗಳ ಸರಾಸರಿ ಮಾರಾಟವು ಸಂಯೋಜನಾ ಪೂರ್ವದ ಅವಧಿಯ ತಿಂಗಳ ಸರಾಸರಿ ಮಾರಾಟಕ್ಕಿಂತ ಎರಡು ಪಟ್ಟು ಹೆಚ್ಚಾಗಿದೆ.

2) ಮೊದಲ ಐದು ತಿಂಗಳ ಅವಧಿಗೆ, ಪ್ರತಿ ತಿಂಗಳಿಗೆ ರೂ. 500 ಪಾವತಿಸಿದ್ದು, ನಂತರದ ಅವಧಿಗೆ ಪ್ರತಿ ತಿಂಗಳ ಬಾಡಿಗೆಯಲ್ಲಿ ರೂ. 100 ಹೆಚ್ಚಳವಾಗಿದೆ.

3) ಒಟ್ಟು ವಸೂಲಾಗದ ಸಾಲದಲ್ಲಿ ರೂ. 900, ದಿನಾಂಕ 1/8/2021ರ ನಂತರದ ಉದ್ದರಿ ಮಾರಾಟ 1/10/2021ಕ್ಕೆ ಸಂಬಂಧಿಸಿದೆ.

4) ರೂ. 1,00,000 ಮೌಲ್ಯದ ಯಂತ್ರವನ್ನು ದಿನಾಂಕ 1/6/2021ರಂದು ಖರೀದಿಸಲಾಗಿದ್ದು, ದಿನಾಂಕ 31/1/2022ರ ವರೆಗೆ ಉಪಯೋಗಿಸಲಾಗಿದೆ. ಸವಕಳಿಯು ವಾರ್ಷಿಕ 20% ಆಗಿರುತ್ತದೆ.

5) ದಿನಾಂಕ 1/7/2021 ರಿಂದ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿಯನ್ನು ಇರಿಸಲಾಗಿದೆ.

6) ಮರು ಪಾವತಿಯಿಂದ ವಸೂಲಾಗದ ಸಾಲವು 2020-21 ರ ವರ್ಷಕ್ಕೆ ಸೇರಿದ್ದಾಗಿದೆ.

ಮೇಲಿನ ವಿವರಗಳಿಂದ ಸಂಯೋಜನಾ ಪೂರ್ವ ಹಾಗೂ ನಂತರದ ಅವಧಿಗಳ ಲಾಭ ಅಥವಾ ನಷ್ಟವನ್ನು ಕಂಡುಹಿಡಿಯಿರಿ.

9. ಲಾಂಗ್ ರೋಡ್ ಕಂಪನಿಯ, ದಿನಾಂಕ 31/12/2021ರ ಅಢಾವೆ ಪತ್ರಿಕೆಯು ಕೆಳಕಂಡಂತಿದೆ.

ಜವಾಬ್ದಾರಿಗಳು	ಮೊತ್ತ ರೂ.	ಆಸ್ತಿಗಳು	ಮೊತ್ತ ರೂ.
ರೂ. 10 ರ ಸಾಮಾನ್ಯ ಶೇರುಗಳು	3,50,000	ಸ್ಥಿರಾಸ್ತಿಗಳು	3,20,000
ಸಾಮಾನ್ಯ ಮೀಸಲು ನಿಧಿ	1,20,000	ಹೂಡಿಕೆಗಳು (ದೀರ್ಘಕಾಲಿಕ)	20,000
ಲಾಭ-ನಷ್ಟ ಖಾತೆ	75,000	(ಸರ್ಕಾರಿ ಬಾಂಡುಗಳು ಅಲ್ಲ)	
ಚಾಲ್ತಿ ಜವಾಬ್ದಾರಿಗಳು	60,000	ಚಾಲ್ತಿ ಆಸ್ತಿಗಳು	2,65,000
	6,05,000		**6,05,000**

ಹೆಚ್ಚುವರಿ ವಿವರಗಳು :

a) ತೆರಿಗೆಯನ್ನು ಕಟಾಯಿಸುವುದಕ್ಕೆ ಮುಂಚಿನ ನಿವ್ವಳ ಲಾಭ
2019 - ರೂ. 70,000; 2020 - ರೂ. 65,000; 2021 ರೂ. 95,000

b) ವಾರ್ಷಿಕ ತೆರಿಗೆ ದರ 25%

c) ಸಾಮಾನ್ಯ ಲಾಭದ ದರ 12%

d) ತೆರಿಗೆ ಕಳೆದ ನಂತರದ ಲಾಭಾಂಶದಲ್ಲಿ ಶೇ. 10 ರಷ್ಟನ್ನು ಸಾಮಾನ್ಯ ಮೀಸಲು ನಿಧಿಗೆ ವರ್ಗಾಯಿಸುವುದು.

e) ಸ್ಥಿರಾಸ್ತಿಯನ್ನು ಶೇಕಡಾ 15ರಷ್ಟು ಹೆಚ್ಚು ಮತ್ತು ಚಾಲ್ತಿ ಜವಾಬ್ದಾರಿಗಳನ್ನು ಶೇ. 5 ರಷ್ಟು ಕಡಿಮೆ (ಪುಸ್ತಕ ದರಕ್ಕೆ ಹೋಲಿಸಿದಾಗ) ಪರಿಗಣಿಸುವುದು.

ಮೇಲಿನ ಅಂಶಗಳಿಂದ ಕೆಳಗಿನ ವಿಧಾನಗಳಲ್ಲಿ ಸುನಾಮದ ಮೌಲ್ಯವನ್ನು ಕಂಡುಹಿಡಿಯಿರಿ.

i) 3 ವರ್ಷದ ಉತ್ಕೃಷ್ಟ ಲಾಭ ಖರೀದಿಸಿದಂತೆ

ii) ಉತ್ಕೃಷ್ಟ ಲಾಭದ ಬಂಡವಾಳೀಕರಿಸಿದಂತೆ ಮತ್ತು

iii) ವರ್ಷಾಸನ ಉತ್ಕೃಷ್ಟ ಲಾಭ ವಿಧಾನ (ಶೇ. 10 ರಂತೆ ಐದು ವರ್ಷಗಳ ವರ್ಷಾಸನದಂತೆ ಒಂದು ರೂಪಾಯಿಯ ಪ್ರಸಕ್ತ ಮೌಲ್ಯ ರೂ. 3.78)

10. ಬ್ಲ್ಯಾಕ್ ಲೈಟ್ ಲಿಮಿಟೆಡ್‌ನ ದಿನಾಂಕ 31/03/2022ರ ಅಢಾವೆ ಪತ್ರಿಕೆಯು ಈ ಕೆಳಕಂಡಂತಿದೆ.

ಜವಾಬ್ದಾರಿಗಳು	ಮೊತ್ತ ರೂ.	ಆಸ್ತಿಗಳು	ಮೊತ್ತ ರೂ.
ರೂ. 10ರ ಮೌಲ್ಯದ 20000		ಸುನಾಮ	50,000
ಸಾಮಾನ್ಯ ಶೇರುಗಳು (ಪೂರ್ತಿ ಪಾವತಿ)	2,00,000	ಸ್ಥಿರಾಸ್ತಿಗಳು	2,25,000
ಸಾಮಾನ್ಯ ಮೀಸಲು ನಿಧಿ	50,000	ಚರಾಸ್ತಿಗಳು	95,000
ಲಾಭ ಮತ್ತು ನಷ್ಟ ಖಾತೆ	17,500	ಆರಂಭಿಕ ವೆಚ್ಚಗಳು	12,500
6% ಸಾಲಪತ್ರಗಳು	50,000		
ಚಾಲ್ತಿ ಜವಾಬ್ದಾರಿಗಳು	65,000		
	3,82,500		**3,82,500**

ಶೇರುಗಳ ಮೌಲ್ಯ ಕಂಡುಹಿಡಿಯುವ ಉದ್ದೇಶಕ್ಕಾಗಿ ಸ್ಥಿರಾಸ್ತಿಗಳನ್ನು ರೂ. 2,50,000 ಹಾಗೂ ಸುನಾಮವನ್ನು ರೂ. 75,000 ಎಂದು ಪರಿಗಣಿಸುವುದು. ರೂ. 37,500 ಋಣಿಗಳ ಮೇಲೆ ಶೇ. 10ರಷ್ಟು ಮೀಸಲನ್ನು ಅನುಮಾನಾಸ್ಪದ ಸಾಲಗಳಿಗಾಗಿ ಸೃಷ್ಟಿಸುವುದು. ಸರಕಿನ ಮೌಲ್ಯವನ್ನು ರೂ. 4,500 ರಷ್ಟು ಹೆಚ್ಚಾಗಿ ತೋರಿಸಿರುವುದನ್ನು ಸರಿಪಡಿಸುವುದು.

ಕಳೆದ ಮೂರು ವರ್ಷಗಳ ನಿವ್ವಳ ಲಾಭ ತೆರಿಗೆ ಕಡಿತದ ನಂತರ, ಕ್ರಮವಾಗಿ ರೂ. 34,500, ರೂ. 35,900 ಮತ್ತು ರೂ. 45,100 ರಂತಿದೆ. ಈ ಲಾಭದಲ್ಲಿ ಶೇ. 20 ಮೀಸಲು ನಿಧಿಗೆ ಪ್ರತಿ ವರ್ಷ ವರ್ಗಾಯಿಸಲ್ಪಡುತ್ತದೆ. ಉದ್ಯಮದ ಸಾಧಾರಣ ಲಾಭದ ದರ ಶೇ. 20 ರಷ್ಟಿರುತ್ತದೆ.

ಪ್ರತಿ ಶೇರಿನ

i) ಅಂತರ್ಗತ ಮೌಲ್ಯ

ii) ಇಳುವರಿ ಮೌಲ್ಯ ಹಾಗೂ

iii) ನ್ಯಾಯಯುತ ಮೌಲ್ಯವನ್ನು ಕಂಡುಹಿಡಿಯಿರಿ.

11. ದಿನಾಂಕ 31/03/2022ರಂದು ವೈಟ್ ಮಿಲ್ಕ್ ಲಿ. ಕಂಪನಿಯ ಖಾತಾ ಸಮತೋಲನ ಮೌಲ್ಯಗಳು ಈ ಕೆಳಗಿನಂತಿವೆ. ಇವುಗಳು ಹಾಗೂ ಹೆಚ್ಚಿನ ವಿವರಗಳಿಂದ ಕಂಪನಿಯ ಅಂತಿಮ ಲೆಕ್ಕಗಳನ್ನು ಸಿದ್ದಪಡಿಸಿ.

ಧನಿಗಳು	ಮೊತ್ತ ರೂ.	ಋಣಿಗಳು	ಮೊತ್ತ ರೂ.
ದಾಸ್ತಾನು ದಿನಾಂಕ 1/4/2021ರಂದು	1,87,500	ಅನುಮಾನಾಸ್ಪದ ಸಾಲಗಳ ಮೇಲಿನ	
ಸ್ಥಾವರ ಮತ್ತು ಯಂತ್ರಗಳು	8,25,000	ಮೀಸಲು ದಿನಾಂಕ 1/4/2021ರಂತೆ	8,750
ಭೂಮಿ ಮತ್ತು ಕಟ್ಟಡಗಳು	7,68,000	ಸಾಮಾನ್ಯ ಮೀಸಲು ನಿಧಿ	62,500
ಧನಿಗಳು	2,17,500	ಮಾರಾಟ	10,37,500
ಸುನಾಮ	62,500	ಋಣಿಗಳು	1,44,375
ಬ್ಯಾಂಕಿನಲ್ಲಿರುವ ನಗದು	1,01,625	ಕೊಡಬೇಕಾಗಿರುವ ಹುಂಡಿಗಳು	48,125
ಶೇರು ಕರೆಗಳ ಮೇಲಿನ ಬಾಕಿ ಹಣ	18,750	ಲಾಭ ಮತ್ತು ನಷ್ಟ ಖಾತೆ	65,625
ಮಧ್ಯಂತರ ಲಾಭಾಂಶ	98,125	12% ಸಾಲಪತ್ರಗಳು	7,50,000
ಖರೀದಿಗಳು	4,62,500	ಶೇರು ಬಂಡವಾಳ	10,00,000
ಆರಂಭಿಕ ವೆಚ್ಚಗಳು	12,500		
ಕೂಲಿ	2,44,950		
ಸಾಮಾನ್ಯ ವೆಚ್ಚಗಳು	17,085		
ವೇತನಗಳು	50,562		
ವಸೂಲಾಗದ ಸಾಲಗಳು	5,278		
ಸಾಲಪತ್ರಗಳ ಮೇಲೆ ಪಾವತಿಸಿರುವ ಬಡ್ಡಿ	45,000		
	31,16,875		**31,16,875**

ಹೆಚ್ಚುವರಿ ವಿವರಗಳು :

a) ಸ್ಥಾವರ ಮತ್ತು ಯಂತ್ರಗಳ ಮೇಲಿನ ಸವಕಳಿ 20%

b) ಅಂತಿಮ ದಾಸ್ತಾನಿನ ಮೌಲ್ಯ ರೂ. 2,62,500

c) ತೆಗೆದು ಹಾಕಬೇಕಾದ ಆರಂಭಿಕ ವೆಚ್ಚಗಳು ರೂ. 1,250

d) ಸಾಲ ಪತ್ರಗಳ ಮೇಲೆ ಇನ್ನೂ ಅರ್ಧ ವರ್ಷಗಳ ಬಡ್ಡಿ ಬಾಕಿ ಇದೆ

e) ಸಾಮಾನ್ಯ ನಿಧಿಗೆ ವರ್ಗಾಯಿಸಬೇಕಿರುವ ಮೊತ್ತ ರೂ. 6,250

f) ಇನ್ನೂ ಪಾವತಿ ಮಾಡಬೇಕಾಗಿರುವ ವೇತನಗಳು ರೂ. 6,000 ಮತ್ತು ಹೆಚ್ಚುವರಿಯಾಗಿ ಪಾವತಿಸಿರುವ ಸಾಮಾನ್ಯ ವೆಚ್ಚಗಳು ರೂ. 2,000

g) ಲಾಭಾಂಶದ ಮೇಲೆ ನೀಡಬೇಕಿರುವ ತೆರಿಗೆ (CDT)ಯನ್ನು ನಿರ್ಲಕ್ಷಿಸಿ.